ಮಾಡುವುದು ಮತ್ತು ವೇಶ್ಯಾವಾಟಿಕೆಗೆ ಹೆಂಗಸರನ್ನು ಸರಬರಾಜು ಮಾಡುವ ವಿಚಾರವನ್ನು ಎತ್ತುತ್ತಾರೆ. ಎಂದು ಬಂದಿದೆ. ಪ್ರಚಾರಕ್ಕಾಗಿ ಮಾಡುವುದಾದರೆ ಆ ಮಾತು ಬೇರೆ. ಇವತ್ತಿನವರೆಗೆ ಇಂಥ ಘಟನೆ ಈ ಸದನಕ್ಕೆ ಸಂಬಂಧಪಟ್ಟಂತೆ ನಡೆದಿಲ್ಲ. ನಿನ್ನೆಯ ದಿವಸವೇ ಈ ವಿಚಾರವನ್ನು ಎತ್ತಬೇಕೆಂದು ಇದ್ದೆ, ಆದರೆ ಅದಕ್ಕೆ ಅವಕಾಶವಾಗಲಿಲ್ಲ. ಒಂದಾದ ಮೇಲೆ ಒಂದು ಪ್ರಸಂಗಗಳು ಬಂದವು. ನಮಗೆ ಯಾವ ವಿಚಾರ ಎಂದು ಗೊತ್ತಿಲ್ಲ. ಯಾವ ಮಂತ್ರಿಗಳು ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೆಂದು ಗೊತ್ತಾಗಲಿಲ್ಲ. ಇವತ್ತು ಈ ವಿಚಾರವನ್ನು ಎತ್ತುತ್ತ ಒಂದು ದೊಡ್ಡ ಜಾಲ ಇದೆ ಎಂದರು. ಅಲ್ಲಿ ಏನೊಂದು ಘಟನೆ ನಡೆದಿದೆ ಅದರ ಬಗ್ಗೆ ವಿವರ ತರಿಸುತ್ತೇನೆ. ಮೊನ್ನೆ ದಿವಸ ಪತ್ರಿಕೆಗೆ ಕೊಡುವ ಬದಲು ನನಗೆ ಳ ಸಾಲಿನ ಒಂದು ಪತ್ರ ಬರೆದಿದ್ದರೆ ಇಷ್ಟು ಹೊತ್ತಿಗೆ ಅದಕ್ಕೆ ಸಂಬಂಧಪಟ್ಟ ಪೂರ್ಣ ವಿವರವನ್ನು ತರಿಸುತ್ತಿದ್ದೆ. ಪತ್ರಿಕೆಗೆ ಕೊಟ್ಟರು, ಆದರೆ ಅವರು ನಮಗೆ ಹೇಳಲಿಕ್ಕೆ ಏನು ಅನುಮಾನವೋ ಗೊತ್ತಾಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವಿಚಾರದ ಬಗ್ಗೆ ನಾನು ತಮಗೆ ನೋಟೀಸ್ ಕೊಟ್ಟು ಇವತ್ತಿಗೆ ೫ ದಿವಸವಾಯಿತು. ಬಿಜಾಪುರದ ಪತ್ರಿಕೆಯಲ್ಲಿ ೨೨ನೇ ಆಗಸ್ಟ್ ೧೯೮೩ರಂದು ಈ ವಿಚಾರ ಬಂದಿದೆ. ಮೊನ್ನೆ ಬೆಳಿಗ್ಗೆ ಈ ವಿಚಾರವನ್ನು ಇಲ್ಲಿ ಎತ್ತಿದಾಗ ಆಮೇಲೆ ಪ್ರಸ್ತಾಪ ಮಾಡಿ ಎಂದು ಅಧ್ಯಕ್ಷರು ಹೇಳಿದರು. ನಿನ್ನೆ ನಾನು ಇದರ ಬಗ್ಗೆ ಒತ್ತಾಯ ಮಾಡಲಿಲ್ಲ. ಏಕೆಂದರೆ ಪತ್ರಿಕೆಯಲ್ಲಿ ಬಂದ ಮೇಲೆ ಒತ್ತಾಯ ಮಾಡಿದರೆ ಜನರು ತಪ್ಪು ತಿಳಿದುಕೊಳ್ಳುತ್ತಾರೆ, ಪತ್ರಿಕೆಯಲ್ಲಿ ಕೊಟ್ಟು ಇಲ್ಲಿ ಎತ್ತುತ್ತಾರೆಂಬ ಅಭಿಪ್ರಾಯ ಬರಬಾರದೆಂದು ಒತ್ತಾಯಿಸಲಿಲ್ಲ. ಅಧ್ಯಕ್ಷರ ಹತ್ತಿರ ನಾನು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಇವತ್ತು ಒತ್ತಾಯ ಮಾಡಬೇಕೆಂದು ಇದ್ದೆ. ನಾವು ಪತ್ರಿಕೆಯಲ್ಲಿ ಆ ರೀತಿ ಹೇಳಿಕೆ ಕೊಡಲಿಲ್ಲ. ವಿಚಾರವನ್ನು ಪ್ರಸ್ತಾಪ ಮಾಡುವಾಗ ಯಾವ ಮಂತ್ರಿಗಳ ವಿಚಾರವನ್ನು ಹೇಳಲಿಲ್ಲ. ಅದನ್ನು ತಾವು ತನಿಖೆ ಮಾಡಬೇಕು. ಚಿಮ್ಮನಕಟ್ಟಿಯವರು ಹೇಳಿದ ಪ್ರಕಾರ, ಈ ಜಾಲ ಏನಿದೆ, ದೇವದಾಸಿ ಎಂಬ ಕೆಟ್ಟ ಪದ್ಧತಿ ಏನಿದೆ ಇದನ್ನು ನಾಶ ಮಾಡತಕ್ಕದ್ದರಲ್ಲಿ ಸಾರ್ವಜನಿಕರು ಪ್ರಯತ್ನ ಮಾಡಬೇಕು. ಸುಶಿಕ್ಷಿತ ಮಹಿಳೆ ಈ ಒಂದು ಸಮಸ್ಯೆಯನ್ನು ದಿಟ್ಟತನದಿಂದ ಎದುರಿಸತಕ್ಕ ಸಂದರ್ಭದಲ್ಲಿ ಆಕೆಯ ಹಿಂದೆ ಸರ್ಕಾರ ಇರಬೇಕಾಗಿತ್ತು ಎಂದು ಪ್ರಸ್ತಾಪಿಸಿದ್ದೆ. ಈ ಘಟನೆಯಲ್ಲಿ ಸರ್ಕಾರೀ ಅಧಿಕಾರಿಗಳು ಇನ್‌ವಾಲ್ವ್ ಆಗಿರತಕ್ಕ ಸಂದರ್ಭದಲ್ಲಿ ಗೃಹ ಖಾತೆಯನ್ನು ಹೊಂದಿರುವ ತಮಗೆ ಒಂದು ವರ್ತಮಾನ ಬರಲಿಲ್ಲವೆಂದರೆ ಇಂಥ ವಿಚಾರದಲ್ಲಿ ಗೃಹ ಖಾತೆ ಎಷ್ಟು ಜವಾಬ್ದಾರಿತನದಿಂದ ಕೆಲಸ ಮಾಡುತ್ತಿದೆ ಎಂದು ಪ್ರಶ್ನೆ ಮಾಡಬೇಕಾಗಿದೆ. ನಾನು ನೋಟೀಸ್ ಕೊಟ್ಟು ೫ ದಿನವಾಯಿತು. ಪತ್ರಿಕೆಯಲ್ಲಿ ಕೂಡ ವಿಚಾರ ಬಂದಿದೆ. ನನಗೆ ಮಂತ್ರಿಗಳ ಹೆಸರನ್ನು ಹೇಳಿ ರಾಜಕೀಯ ಲಾಭ ಮಾಡಿಕೊಳ್ಳಬೇಕೆಂಬ ಉದ್ದೇಶ ಇಲ್ಲ. ಪ್ರಜಾವಾಣಿಯಲ್ಲಿ ವಿಷಯ ಬರುವುದಕ್ಕೆ ನಾವೇನು ಹೇಳಲಿಕ್ಕೆ ಹೋಗಿಲ್ಲ. ಸದನದಲ್ಲಿ ವಿಚಾರವನ್ನು ಎತ್ತಿದಾಗ ಪತ್ರಿಕೆಗಳವರು ಹಾಕಿರಬಹುದು. ವಿಚಾರವನ್ನು ಎತ್ತಿದಾಗಲೂ ಕೂಡ ಮಂತ್ರಿಗಳ ಹೆಸರನ್ನು ಬಳಸಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೋಟೀಸ್ ಕೊಟ್ಟಮೇಲೆ ಇಷ್ಟು ಹೊತ್ತಿಗೆ ಉತ್ತರ ಕೊಡಬೇಕಾಗಿತ್ತು.

ಅಧ್ಯಕ್ಷರು.—ಉತ್ತರವನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರಲ್ಲ, ಬಿಡಿ.

ಮನವಿಗಳು

ಜಾಗೃತ ಆಯೋಗದಿಂದ ಸೈಟಿಂಗಳ ವಿತರಣೆ ಬಗ್ಗೆ ವಿಚಾರಣೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಹಾಗೆ ರಾಜ್ಯ ಜಾಗೃತ ಆಯೋಗ ಒಂದು ಸ್ವಾಯತ್ತ ಸಂಸ್ಥೆ. ತನಿಖೆ ನಡೆಸುವುದಕ್ಕೆ ಜಾಗೃತ ಆಯೋಗಕ್ಕೆ ಸಂಪೂರ್ಣವಾದ ಅಧಿಕಾರ ಇದೆ. ಅವರು ಯಾರ ಮೇಲೆ ತನಿಖೆ ನಡೆಸಬಹುದು ಎಂದರೆ ತಮಗೆಲ್ಲಾ ಗೊತ್ತಿರುವಹಾಗೆ ಯಾರು ಸರ್ಕಾರಿ ಸೇವೆಯಲ್ಲಿದ್ದಾರೆ ಅವರ ಮೇಲೆ ಮಾತ್ರ ತನಿಖೆ ನಡೆಸತಕ್ಕ ಅಧಿಕಾರವನ್ನು ಸ್ಪಷ್ಟವಾಗಿ ಪಡೆದಿದ್ದಾರೆ. ಆದರೆ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಖಾಸಗಿ ಜನರ ವಿಚಾರದಲ್ಲಿ ತನಿಖೆ ಮಾಡತಕ್ಕ ಅಧಿಕಾರ ರಾಜ್ಯ ಜಾಗೃತ ಆಯೋಗಕ್ಕೆ ಇಲ್ಲ. ಇದು ಮೂಲಭೂತವಾದ ಪ್ರಶ್ನೆ. ಹಿಂದಿನ ಸರ್ಕಾರ ಇದ್ದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸೈಟುಗಳನ್ನು ಕೊಟ್ಟಿದ್ದರು.

ಅದು ಸರಿಯೋ ತಪ್ಪೋ ಎಂಬುದನ್ನು ನಾನು ಹೇಳುವುದಿಲ್ಲ. ಆದರೆ ಈ ಸರ್ಕಾರ ರಚನೆ ಯಾದ ಮೇಲೆ ಅದನ್ನು ರದ್ದು ಮಾಡಲಿಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇದರಲ್ಲಿ ಯಾರ ಪರ ವಿರೋಧದ ಪ್ರಶ್ನೆ ಇಲ್ಲ. ನನ್ನ ಹತ್ತಿರ ಕೆಲವು ನೋಟೀಸ್‌ಗಳಿವೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೈಟುಗಳನ್ನು ಕೊಟ್ಟಿರುವ ವಿಚಾರದಲ್ಲಿ ಜಾಯಿಂಟ್ ಸೆಕ್ರೆಟರಿಯವರೊಬ್ಬರು ಸರ್ಕಾರದ ಪರವಾಗಿ ವಿಚಾರಣೆ ಮಾಡುತ್ತಿದ್ದಾರೆ. ಅವರು ವಿಚಾರಣೆ ಮಾಡುವುದು ಸರಿಯೋ ತಪ್ಪೋ ಎಂಬ ವಿಚಾರಕ್ಕೂ ನಾನು ಹೋಗುವುದಿಲ್ಲ. ಆ ಕೆಲಸ ಅವರು ಮಾಡಲಿ. ಇಲ್ಲಿ ದಿನಾಂಕ ೧೦–೬–೮೩ ರಂದು ರಾಜ್ಯ ಜಾಗೃತ ಆಯೋಗದ ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್‌ರವರ ಕಚೇರಿಯಿಂದ ನೋಟೀಸ್‌ಗಳು ಹೋಗಿವೆ. ನೋಟೀಸಿಗೆ ಡೆಪ್ಯೂಟಿ ಸೂಪರಿಂಟೆಂಡೆಂಟ್ ಎಂ. ಎಲ್. ನರಸಿಂಹಮೂರ್ತಿ ಎಂಬುವರು ರುಜು ಮಾಡಿದ್ದಾರೆ. ಇವರು ಅಲಾಟೀಸ್‌ಗೆ ನೋಟೀಸ್‌ಗಳನ್ನು ಕಳುಹಿಸಿದ್ದಾರೆ. ಅವರ ಹೆಸರುಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರಿಗೆ ನೋಟೀಸ್ ಕಳುಹಿಸಿ certificate issued by the BDA, domicill certificate, possession certificate, sanctioned plan, and any other elementary documents. ಈ ವಿವರಗಳನ್ನು ಕೇಳಿದ್ದಾರೆ. ವಿಚಾರಣೆ ಮಾಡುವುದಾದರೆ 'ಸರ್ಕಾರದ ಪರವಾಗಿ ಮಾಡಲಿ, ಆದರೆ ಜಾಗೃತ ಆಯೋಗದವರು ನಮಗೆ ನೋಟೀಸ್ ಕೊಡುವುದಕ್ಕೆ ಕಾರಣ ಏನು ಎಂದು ಕೆಲವು ಅಲಾಟೀಸ್ ಲಾಯರ್ ಮುಖಾಂತರ ನೋಟೀಸ್ ಕೊಟ್ಟಿದ್ದಾರೆ. ನೀವು ಯಾವ ಕಾನೂನಿನ ಪ್ರಕಾರ ವಿಚಾರಣೆ ಮಾಡುತ್ತೀರಿ ಎಂದು ಜಾಗೃತ ಆಯೋಗದವರನ್ನು ಕೇಳಿದರೆ ಅವರು ಅದನ್ನು ಹೇಳಿಲ್ಲ. ಈ ಅಲಾಟೀಸ್‌ಗಳಲ್ಲಿ ಹೆಣ್ಣು ಮಕ್ಕಳು ಗಂಡುಮಕ್ಕಳು ಎಲ್ಲಾ ಇದ್ದಾರೆ. ಇವರಿಗೆ ಜಾಗೃತ ಆಯೋಗದವರು ನೋಟೀಸ್ ಕಳುಹಿಸಿ ನೀವು ಇಷ್ಟು ಹೊತ್ತಿಗೆ ಬರಬೇಕು ಎಂದು ಹೇಳುತ್ತಿದ್ದಾರೆ. ಸಾಯಂಕಾಲ ೭–೮ ಗಂಟೆ ಮೇಲೂ ವಿಚಾರಣೆಗೆ ಕರೆಸುತ್ತಿದ್ದಾರೆ. ಲಾಯರ್ ನೋಟೀಸ್ ಕಳುಹಿಸಿದರೂ ಉತ್ತರ ಕೊಡುತ್ತಿಲ್ಲ. ಕೆಲವರು ಪರ್ಸನಲ್ಲಾಗಿ ಹೋಗಿ ಕೇಳಿದರೆ ಇದನ್ನು ವಿಚಾರಣೆ ಮಾಡಬೇಕೆಂದು ಸರ್ಕಾರದಿಂದ ನಮಗೆ ಸೂಚನೆ ಬಂದಿದೆ ಎಂದು ಹೇಳಿದ್ದಾರಂತೆ. ಯಾವ ಕಾನೂನಿನ ಪ್ರಕಾರ ಮಾಡುತ್ತೀರಿ ಎಂದು ಕೇಳಿದರೆ ಅದನ್ನು ಹೇಳಬೇಕೆಂಬ ಕಾನೂನೇನೂ ಇಲ್ಲ ಎಂದು ಹೇಳಿದ್ದಾರೆ. ಜನರಿಗೆ ಇದರಿಂದ ಹೆರಾಸ್‌ಮೆಂಟ್ ಆಗುತ್ತಿದೆ. ನಾನು ಸರ್ಕಾರವನ್ನು ಕೇಳಬಯಸುತ್ತೇನೆ, ನಾನ್–ಆಫಿಷಿಯಲ್ಸ್ ವಿಚಾರದಲ್ಲಿ ವಿಚಾರಣೆ ಮಾಡುವುದಕ್ಕೆ ಜಾಗೃತ ಆಯೋಗಕ್ಕೆ ಅಧಿಕಾರ ಇದೆ ಎಂಬ ವಾದವನ್ನು ಒಪ್ಪುವುದಾದರೆ ಸಿ.ಬಿ.ಡಿ. ಇಲಾಖೆ ಏತಕ್ಕಿರಬೇಕು, ಪೋಲೀಸ್ ಇಲಾಖೆ ಏತಕ್ಕಿರಬೇಕು? ಅಥವಾ ಬೇರೆ ಬೇರೆ ವಿಚಾರಣಾ ದಾರಿ ಏತಕ್ಕಿರಬೇಕು? ಈ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೇ ಪೋಲೀಸ್ ಇಲಾಖೆಯೂ ಸಂಬಂಧಪಟ್ಟಿರುವುದರಿಂದ ಕೇಳುತ್ತಿದ್ದೇನೆ, ರಾಜ್ಯ ಸರ್ಕಾರ ಜಾಗೃತ ಆಯೋಗಕ್ಕೇನಾದರೂ ಬರೆದಿದೆಯೇ? ಸೈಟುಗಳನ್ನು ತೆಗೆದುಕೊಂಡಿರುವ ಬಿ.ಡಿ.ಎ. ಅಲಾಟೀಸ್ ಬಗ್ಗೆ ಜಾಗೃತ ಆಯೋಗದವರು ವಿಚಾರಣೆ ಮಾಡಬೇಕೆಂದು ಸರ್ಕಾರದಿಂದ ಏನಾದರೂ ಪತ್ರ ಬರೆದಿದ್ದೀರಾ? ನಮಗೆ ಪತ್ರಗಳು ಬಂದಿವೆ, ಫೋನ್ ಬಂದಿವೆ, ಆದ್ದರಿಂದ ವಿಚಾರಣೆ ಮಾಡುತ್ತೇವೆ ಎಂದು ಅವರು ಹೇಳಿದ್ದಾರಂತೆ. ಒಂದು ವೇಳೆ ಹಾಗೆ ಮಾಡಿದ್ದರೆ ಯಾವ ಕಾನೂನು ಪ್ರಕಾರ ಜಾಗೃತ ಆಯೋಗದವರು ಖಾಸಗಿ ಜನರ ಮೇಲೆ ವಿಚಾರಣೆ ಮಾಡುತ್ತಾರೆ? ತಾವು ಯಾವ ಕಾನೂನಿನ ಪ್ರಕಾರ ಜಾಗೃತ ಆಯೋಗದವರು ಪತ್ರ ಬರೆದಿದ್ದೀರಿ? ಕಾನೂನು ವಿಚಾರ ಮಾತ್ರ ನಾನು ಹೇಳುತ್ತಿದ್ದೇನೆ, ಬೇರೆ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಸರ್ಕಾರದ ಪರವಾಗಿ ಒಂದು ವಿಚಾರಣೆ ನಡೆಯುತ್ತಿರುವಾಗ ಮತ್ತೊಂದು ವಿಚಾರಣೆಗೆ ಹೇಗೆ ಆದೇಶ ಕೊಟ್ಟಿದ್ದಾರೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಒಂದು ವೇಳೆ ಕೊಟ್ಟಿದ್ದರೆ ಹೇಗೆ ಕೊಟ್ಟಿರಿ ಎಂಬ ಬಗ್ಗೆ ಸರ್ಕಾರದಿಂದ ಉತ್ತರವನ್ನು ಪಡೆಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.— ಯಾರಿಂದಲಾದರೂ ಆಪಾದನೆ ಮಾಡಿ ದೂರು ಬಂದರೆ ಅದರ ಆಧಾರದ ಮೇಲೆ ಜಾಗೃತ ಆಯೋಗದವರು ಕ್ರಮ ತೆಗೆದುಕೊಂಡು ವಿಚಾರಣೆ ಮಾಡಬಹುದು, ಅಥವಾ ತಾವೇತಾವಾಗಿ ಕ್ರಮ ಕೂಡ ತೆಗೆದುಕೊಳ್ಳಬಹುದು ರೈಡ್ ಮಾಡಿಸಬಹುದು ಕಾಗದ ಪತ್ರಗಳನ್ನು ಸೀಜ್ ಮಾಡಿಸಬಹುದು, ಈ ಹಕ್ಕು ಅವರಿಗಿದೆ. ಈಗ ಕಾನೂನಿನ ರೀತಿಯಲ್ಲಿ ಯಾರಿಗಾದರೂ ತೊಂದರೆ ಕೊಡುತ್ತಿದ್ದರೆ ಆ ಜನರು ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಬಹುದು ಕೋರ್ಟಿಗೆ ಹೋಗಬಹುದು. ಕೆಲವು ಜನರು ಕೋರ್ಟಿಗೆ ಹೋಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಅವರು ಸರ್ಕಾರಿ ನೌಕರರಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.— ಅಲ್ಲದಿದ್ದರೆ ಕೋರ್ಟಿಗೆ ಹೋಗಬಹುದು, ಸ್ಟೇ ಆರ್ಡರ್ ತರಬಹುದು. ಕೆಲವು ಜನರು ಕೋರ್ಟಿಗೆ ಹೋಗಿದ್ದಾರೆ ಎಂದು ಗೊತ್ತಾಗಿದೆ. ಆ ಕಾರಣದಿಂದ ಇದನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ. ಅವರು ಕೋರ್ಟಿಗೆ ಹೋಗಿರುವುದರಿಂದ ವಿಜಿಲೆನ್ಸ್ ಕಮಿಷನ್‌ನವರು ಮಾಡಿದ್ದು ಸರಿಯೋ ತಪ್ಪೋ ಎಂಬುದನ್ನು ಅವರು ನಿರ್ಧಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಾನು ಕೇಳಿದ ಪ್ರಶ್ನೆ ಏನೆಂದರೆ ರಾಜ್ಯ ಸರ್ಕಾರದವರು ರಾಜ್ಯ ಜಾಗೃತ ಆಯೋಗದವರಿಗೇನಾದರೂ ಪತ್ರ ಬರೆದಿದ್ದೀರಾ?

ಅಧ್ಯಕ್ಷರು.—*Suo-moto* ಮಾಡಬಹುದು ಎಂದು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಆ ಪ್ರಶ್ನೆ ಬೇರೆ. ನಾನು ಸರ್ಕಾರಕ್ಕೆ ಕೇಳತಕ್ಕದ್ದು ಸರ್ಕಾರದಿಂದ ಜಾಗೃತ ಆಯೋಗಕ್ಕೆ ಪತ್ರ ಬರೆದಿದ್ದೀರಾ? ಅಥವಾ ಫೋನ್ ಮಾಡಿದ್ದೀರಾ? ಏನು ಮಾಡಿದ್ದಾರೆ ಎಂಬುದನ್ನು ಹೇಳಿದರೆ ಸಾಕು.

ಶ್ರೀ ರಾಮಕೃಷ್ಣ ಹೆಗ್ಗಡೆ.— ನಾವಂತೂ ಯಾರಿಗೂ ಫೋನ್ ಮಾಡಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ, subject to verification ನಮ್ಮ ಸರ್ಕಾರದಿಂದ ವಿಜಿಲೆನ್ಸ್ ಕಮಿಷನ್‌ಗೆ ಯಾವುದೇ ಸೂಚನೆ ಹೋಗಿಲ್ಲ.

ಮಡಿಕೇರಿ ಪೇಟೆಯಲ್ಲಿ ಎನ್.ಕೆ. ಸುರೇಶ ಎಂಬುವರಿಗೆ ಪೋಲೀಸರಿಂದ ಆದ ಚಿತ್ರಹಿಂಸೆ ಬಗ್ಗೆ

ಶ್ರೀ ಎಂ.ಎಂ. ನಾಣಯ್ಯ (ಮಡಿಕೇರಿ).— ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೩-೧-೮೩ರಂದು ಕೊಡಗು ಜಿಲ್ಲೆಯ ಮಡಿಕೇರಿ ಪೇಟೆಯಲ್ಲಿ ಕನಕದಾಸ ರಸ್ತೆಯ ನಿವಾಸಿ ಎನ್.ಕೆ. ಸುರೇಶ ಎಂಬುವರು ಕಾವೇರಿ ಚಿತ್ರಮಂದಿರದಲ್ಲಿ ಚಿತ್ರ ನೋಡುತ್ತಿದ್ದಾಗ ರಾತ್ರಿ ೧೧-೩೦ರಲ್ಲಿ ಪೋಲೀಸರು ಎಳೆದು ಕೊಂಡುಹೋಗಿ ಲಾಕಪ್‌ನಲ್ಲಿ ಹಾಕಿ ಬಟ್ಟೆ ಬಿಚ್ಚಿ ಹೊಡೆದು ಮೈಯೆಲ್ಲಾ ಗಾಯ ಮಾಡಿದ್ದಾರೆ. ಹೊಡೆಯಬೇಡಿ ಬಿಡಿ ಎಂದು ಹೇಳಿದರೂ ಸಬ್-ಇನ್‌ಸ್ಪೆಕ್ಟರ್ ಬಿಡಲಿಲ್ಲ. ಅವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ನೋವನ್ನುಂಟು ಮಾಡಿದ್ದಾರೆ. ಇದು ಹೇಗಾಯಿತೆಂದರೆ ಚಿತ್ರಮಂದಿರದಲ್ಲಿ ಅವರು ಕುಳಿತಿರುವಾಗ ಒಬ್ಬ ಅಪರಿಚಿತ ವ್ಯಕ್ತಿ ಬಂದು ಪಕ್ಕದಲ್ಲಿ ಕೂರುತ್ತಾರೆ. ನಂತರ ಪೋಲೀಸರು ಬಂದು ದರದರ ಎಂದು ಎಳೆದುಕೊಂಡುಹೋಗುತ್ತಾರೆ. ಜೀಪಿಗೆ ಎಳೆದುಕೊಂಡುಹೋಗಿ ಲಾಕಪ್‌ನಲ್ಲಿ ಹಾಕಿದನಂತರ ಬೆಳಿಗ್ಗೆ ೧೧ ಗಂಟೆಯವರೆಗೂ ಬಿಡುವುದಿಲ್ಲ. ಏತಕ್ಕೆ ಬಿಡುವುದಿಲ್ಲ ಎಂದು ಕೇಳಿದರೆ ಅದಕ್ಕೆ ಸರಿಯಾಗಿ ಸಮಜಾಯಿಷಿ ಕೊಡುವುದಿಲ್ಲ. ಅನೇಕ ಜನರು ಅವರನ್ನು ಬಿಡಿಸಲು ಪ್ರಯತ್ನ ಮಾಡಿದಾಗ ನೀವೆಲ್ಲಾ ಏತಕ್ಕೆ ಬರುತ್ತೀರಿ, ಇವರ ಮೇಲೆ ಬಹಳ ಆಪಾದನೆಗಳಿವೆ ಎಂದು ಹೇಳಿದ್ದಾರೆ. ಆದರೆ ನಿಜವಾಗಿಯೂ ಅವರ ಮೇಲೆ ಯಾವ ಅಪರಾಧವೂ ಇಲ್ಲ. ಅವರು ಯುವ ಕಾಂಗ್ರೆಸ್ಸಿನ ಪದಾಧಿಕಾರಿ, ಮಡಿಕೇರಿ ತಾಲ್ಲೂಕು ಯುವಕ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿ, ಒಳ್ಳೆಯ ವಾಲಿಬಾಲ್ ಆಟಗಾರ, ಸೌಮ್ಯ ವ್ಯಕ್ತಿ, ಒಳ್ಳೆಯ ನಾಗರೀಕ ಪ್ರಜೆ, ಕೇವಲ ೨೮ ವಯಸ್ಸಾಗಿದೆ. ಅಂಥವರನ್ನು ಈ ರೀತಿ ಸದೆಬಡಿದು ಅಮಾನುಷವಾಗಿ ಪೋಲೀಸ್ ಠಾಣೆಯಲ್ಲಿ ಹಿಂಸೆ ಕೊಡುವುದರಲ್ಲಿ ಏನರ್ಥವಿದೆ? ಮೊನ್ನೆ ವಿರಾಜಪೇಟೆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರ ಮೇಲೆ ಪೋಲೀಸರು ತೊಂದರೆ ಮಾಡಿದ್ದಾರೆ. ಇವತ್ತು ಯುವಕ ಕಾಂಗ್ರೆಸ್ಸಿನ ಕಾರ್ಯಕರ್ತನಿಗೆ ಹಿಂಸೆ ಮಾಡಿದ್ದಾರೆ. ಪೋಲೀಸರು ಯೂನಿಫಾರಂ ಹಾಕಿದನಂತರ ಈ ರೀತಿ ಮಾನವೀಯತೆಯನ್ನು ಏತಕ್ಕೆ ಕಳೆದುಕೊಳ್ಳುತ್ತಿದ್ದಾರೋ ಅರ್ಥವಾಗುತ್ತಿಲ್ಲ. ಅವರ ಮೇಲೆ ಆಪಾದನೆ ಇದ್ದರೆ ಕಾನೂನು ಕ್ರಮ ಕೈಗೊಳ್ಳಬಹುದಾಗಿತ್ತು. ಅವರಿಗೆ ಯಾವ ರೀತಿ ಹೊಡೆದಿದ್ದಾರೆ ಎಂಬ ಬಗ್ಗೆ ಎರಡು ಮೂರು ಚಿತ್ರ ತೆಗೆದಿದ್ದು ಅದನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇನೆ. ಇದು ಮನುಷ್ಯರಿಗೆ ಹೊಡೆಯುವಂಥದ್ದೋ ಅಥವಾ ಯಾವುದಾದರೂ ಪ್ರಾಣಿಗಳಿಗೆ ಹೊಡೆಯುವಂಥದ್ದೋ ನೋಡಬೇಕಾಗಿದೆ. ಈ ವಿಷಯ ಪತ್ರಿಕೆಯಲ್ಲೂ ಬಂದಿದ್ದು ಫೋಟೋ ಕೂಡ ತೆಗೆದಿದ್ದಾರೆ.

ಈ ರೀತಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಬಹಳ ಕಿರುಕುಳವಾಗಿದೆ. ನಂತರ ಅಲ್ಲಿ ಅನೇಕ ಜನ ಆಲ್ಲಿಗೆ ಹೋಗಿ ಆತ ಸೌಮ್ಯ ವ್ಯಕ್ತಿ, ನಾವು ಜಾಮೀನು ನೀಡುತ್ತೇವೆ ಬಿಡಿ ಎಂದು ಹೇಳಿದರೂ